ಶ್ರೀ ಜೆ. ದೇವಯ್ಯ.—900 ಎಕರೆ ಅಚ್ಚುಕಟ್ಟಿನ ಎಸ್ಟ್ರೀರ್ಣವೆಂದು ಹೇಳಿದ್ದೀರಿ, ಇದು ಹಳೆಯ ಅಚ್ಚುಕಟ್ಟೋ, ಅಥವಾ ಹೊಸ ಅಚ್ಚುಕಟ್ಟೆ ?

†ಶ್ರೀ ಆಲೂರು ಹನುಮಂತಪ್ಪ.—ಹಳೆಯ ಅಚ್ಚುಕಟ್ಟು.

ಶ್ರೀ ಜೆ. ದೇವಯ್ಯ.—ಹಳೆಯ ಅಚ್ಚುಕಟ್ಟಿಗೆ ನೀರು ನಷ್ಟೆಯಾಗುತ್ತಿಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಪಿಕ್-ಅಪ್ ಮಾಡಿಯಾಗಿದೆ. ಚೇರ್-ಎಂಡ್-ರ್ಯಾಂಡ್ ಮುಖಾಂತರ ನೀರು ಕೊಡಬೇಕೆಂದಿದ್ದೇವೆ.

ಶ್ರೀ ಜೆ. ದೇವಯ್ಯ.—ಈ ಪಿಕ್-ಅಪ್‌ನಿಂದ ಹೆಬ್ಬಳ ಪಿಕ್-ಅಪ್‌ಗೆ ನೀರು ಕಡಮೆಯಾಗುವುದಿಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಇದರಲ್ಲಿ ಒಂದು ನೂರು ಕ್ಯೂಸೆಕ್ಸ್ ನೀರು ಬರುತ್ತದೆ ಈಗ 35 ಕ್ಯೂಸೆಕ್ಸ್ ನೀರನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದೇವೆ.

ಶ್ರೀ ಜೆ. ದೇವಯ್ಯ.—ಇದಕ್ಕೆ ಕಂಟ್ರಾಕ್ಟ್‌ದಾರರು ಯಾರು ?

ಅಧ್ಯಕ್ಷರು.—ಕಂಟ್ರಾಕ್ಟ್‌ದಾರರ ಹೆಸರನ್ನು ಹೇಳಬಾರದೆಂದು ಹೇಳಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ.—900 ಎಕರೆಯೆಂದು ಹೇಳಿದ್ದೀರಿ. ಜಮೀನು ಕಳೆದುಕೊಂಡಿರುವವರಿಗೆ ಏನು ಪರಿಹಾರ ಕೊಟ್ಟಿದ್ದೀರಿ, ಹಣದ ರೂಪದಲ್ಲಿ ಕೊಟ್ಟಿದ್ದೀರಾ ಅಥವಾ ಬೇರೆ ಕಡೆ ಜಮೀನನ್ನು ಪರಿಹಾರವಾಗಿ ಕೊಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಕಾಂಪೆನ್‌ಸೇಷನ್ ಕೊಡಬೇಕೆಂದು ಕೇಳಿರುವವರಿಗೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ. ಯಾರು ಯಾರು ಜಮೀನು ಬೇಕೆಂದು ಕೇಳಿದ್ದಾರೋ ಅವರಿಗೆ ಜಮೀನು ಕೊಡಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರ ನಿಗದಿ ಮಾಡಿದಂಥ ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದರೂ ಅವನ್ನು ಬೇರೆಯವರಿಗೆ ಸಬ್ ಕಂಟ್ರಾಕ್ಟ್ ಮಾಡುವ ಪದ್ಧತಿ ಈ ಸರ್ಕಾರದಲ್ಲಿದ್ದರೆ ಅದು ತಪ್ಪಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಒಬ್ಬರಿಗೆ ಕಂಟ್ರಾಕ್ಟ್ ಕೊಟ್ಟಮೇಲೆ ಮತ್ತೆ ಬೇರೆಯವರಿಗೆ ಹೇಗೆ ಕೊಡಲಾಗುತ್ತದೆ ?

ಅಧ್ಯಕ್ಷರು.—ಆ ಪ್ರಶ್ನೆ ಪ್ರತ್ಯೇಕವಾದುದು. ಸರ್ಕಾರದವರು ಸಬ್ ಕಂಟ್ರಾಕ್ಟ್ ಕೊಡುವುದು ಸರಿಯೇ ಎಂಬುದನ್ನು ನೋಡಬೇಕು.

2.00 P.M.

Construction of Neralur Tank in Channapatna Taluk.

*Q.—15. Sri B. J. LINGE GOWDA (Channapatna). —

Will the Minister for Public Works be pleased to state :—

(*a*) the date on which the estimate for construction of Neralur Tank in Channapatna Taluk was sanctioend ;

(*b*) the date on which the actual construction was taken up ;

(*c*) the outlay (expenditure) incurred so far ;

(*d*) since when the construction was stopped and the reasons therefor ?

A.—Sri ALUR HANUMANTHAPPA (Deputy Minister for Minor Irrigation)—

(*a*) June 1959.

(*b*) September 1959.

(*c*) Rs. 4,51,500 to end of June 1966.

(*d*) The work on bund has been stopped since 1963 as the owners of the submergeable lands obstructed the work for want of payment of compensation charges.

ಶ್ರೀ ಬಿ. ಜೆ. ಲಂಗೇಗೌಡ.—ಈ ಯೋಜನೆಗೆ 1959ನೇ ಜೂನ್‌ನಲ್ಲಿ ಮಂಜೂರಾದ ಮೊಬಲಗು ಎಷ್ಟು ?

†ಶ್ರೀ ಆಲೂರು ಹನುಮಂತಪ್ಪ.—3 ಲಕ್ಷ 94 ಸಾವಿರ ರೂಪಾಯಿಗಳು.

ಶ್ರೀ ಬಿ. ಜೆ. ಲಂಗೇಗೌಡ.—ಈ ಕಾಮಗಾರಿಯನ್ನು ಮುಗಿಸಬೇಕಾದರೆ ಈಗಾಗಲೇ 4 ಲಕ್ಷ ಚಿಲ್ಲರೆ ಖರ್ಚಾಗಿರುವುದರಿಂದ ಇನ್ನೂ ಎಷ್ಟು ಹಣ ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಒಟ್ಟು 11 ಲಕ್ಷ 50 ಸಾವಿರ ರೂಪಾಯಿ ಬೇಕಾಗುತ್ತದೆ.

ಶ್ರೀ ಬಿ. ಜೆ. ಲಂಗೇಗೌಡ.—ಮೊದಲು ಈ ಯೋಜನೆಯಾದುದು ನುಮಾರು ಮೂರುವರೆ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ. ಈಗ 11 ಲಕ್ಷ ಚಿಲ್ಲರೆ ರೂಪಾಯಿ ಬೇಕಾಗುತ್ತದೆಂದು ಹೇಳುತ್ತಿದ್ದಾರೆ. ಅಂದಮೇಲೆ ಮೊದಲಿನ ಮಂಜೂರಾತಿಯ ಹಣಕ್ಕೂ ಈಗಿನ ಮಂಜೂರಾತಿಯ ಹಣಕ್ಕೂ ಇಷ್ಟು ವ್ಯತ್ಯಾಸವಿರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಮೊದಲು 400 ಎಕರೆಯ ಯೋಜನೆಯೊಂದನ್ನು ಸಿದ್ಧಪಡಿಸಿತ್ತು. ಈಗ ಅದನ್ನೇ 550 ಎಕರೆಗೆ ಅಳವಡಿಸಿದೆ. ಈಗ ರ್ಯಾಂಡ್ ಅಕ್ವಿಸಿಷನ್ ಚಾರ್ಜಸ್ ಬೇರೆ ಸೇರಬೇಕಾಗಿದೆ. ಮೊದಲು 41 ಸಾವಿರ ರೂಪಾಯಿಗಳ ಅಂದಾಜು ಇದ್ದುದು ಈಗ 3 ಲಕ್ಷ ರೂಪಾಯಿಗಳಷ್ಟು ಈ ಯೋಜನೆಗೆ ತಗಲಬಹುದು ಎಂದು ಅಂದಾಜು ಮಾಡಲಾಗಿದೆ.

ಶ್ರೀ ಬಿ. ಜೆ. ಲಂಗೇಗೌಡ.—ಏರಿ ಕೆಲಸ ಎಲ್ಲಿಸಿವೆಯೆಂದು ಹೇಳುತ್ತಿದ್ದಾರೆ. ಕೋಡಿ ರಿವೆಟ್‌ಮೆಂಟ್ ಇದ್ದರೆ ಆ ಕೆಲಸಗಳನ್ನು ಮುಂದುವರಿಸಲು ಅಡ್ಡಿ ಬರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ಭಾಗಗಳಲ್ಲಿ ಏನಹ ಬಾಕಿ ರಿವೆಟ್‌ಮೆಂಟ್ ಭಾಗದ ಕೆಲಸ ಮಾತ್ರ ನಿಂತಿದೆ. ಕೋಡಿ ಕೆಲಸ ಮುಗಿದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—400 ಎಕರೆಗೆ ಮೂರುವರೆ ಲಕ್ಷ ರೂಪಾಯಿಗಳ ಅಂದಾಜಾಗಿ ಈಗ 550 ಎಕರೆಗೆ 11 ಲಕ್ಷ ಚಿಲ್ಲರೆ ರೂಪಾಯಿಗಳ ಅಂದಾಜು ಎಂದು ಹೇಳುತ್ತಾರೆ. ಹೆಚ್ಚಾಗಿರುವ 150 ಎಕರೆಗೆ 7 ಲಕ್ಷ ಚಿಲ್ಲರೆ ಹೆಚ್ಚಾಗಿ ಖರ್ಚುಮಾಡುವುದು ಇದು ಯಾವ ಔಚಿತ್ಯ, ಯಾವ ಬುದ್ಧಿವಂತಿಕೆ, ಇದಕ್ಕೆ ಕಾರಣವೇನಾದರೂ ಹೇಳುತ್ತೀರಾ ?

Mr. SPEAKER.—Information should be asked during Question hour, not justification.

Sri C. J. MUCKANNAPPA.—I want to know the reason for spending Rs. 7 lakhs more to bring in only 150 acres of land under cultivation? The original estimate was for Rs. 3,94,000 to irrigate 400 acres.

Sri ALUR HANUMANTHAPPA.—I have just now narrated that the original estimate was for Rs. 3,94,000 to irrigate 400 acres. The scope of the project has been increased to 55 acres thereby increasing the estimated cost and also due to the increase in the cost of compensation. The compensation cost which was estimated at Rs. 45,000 may now go up to Rs. 3 lakhs. All these factors go to prove the revision of the estimate to Rs. 11,50,000.

SHORT NOTICE QUESTION AND ANSWER.

Alleged Raids on South Indian Hotels in Bombay.

*Q.—4. Sri A. KRISHNA SHETTY (Mangalore-II).—

Will the Chief Minister be pleased to state :—

whether Government are aware of the reported raids on some South Indian Hotels in Bombay on Sunday the 30th October 1966, and what action the Government propose to take in this behalf ?